# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 98 |
| ಸದಸ್ಯರ ಹೆಸರು | : | ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 09/07/2018 |
| ಉತ್ತರಿಸಬೇಕಾದ ಸಚಿವರು | : | ಜಲಸಂಪನ್ಮೂಲ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕೊಪ್ಪಳ, ಚಾಮರಾಜನಗರ, ಮಡಿಕೇರಿ, ಕಾರವಾರಗಳ ಸರ್ಕಾರಿ ವೈದ್ಯಕೀಯ ವಿಜ್ಞಾನ ಸಂಸ್ಥೆಗಳಲ್ಲಿ (NCI) ಸಂಸ್ಥೆಯವರು ಪ್ರವೇಶದ ವೈದ್ಯಕೀಯ ಸೀಟುಗಳನ್ನು ಕಡಿತಗೊಳಿಸಿದ್ದು ನಿಜವೇ; ಹಾಗಿದ್ದಲ್ಲಿ, ಯಾವ ಕಾರಣಕ್ಕಾಗಿ ಸೀಟುಗಳನ್ನು ಕಡಿಗೊಳಿಸಲಾಗಿದೆ; (ವಿವರ ನೀಡುವುದು) | ಚಾಮರಾಜನಗರ, ಮಡಿಕೇರಿ ಮತ್ತು ಕಾರವಾರದ ಸರ್ಕಾರಿ ವೈದ್ಯಕೀಯ ವಿಜ್ಞಾನ ಸಂಸ್ಥೆಗಳಲ್ಲಿ ಎಂಸಿಐ ಸಂಸ್ಥೆಯವರ 2018-19ನೇ ಸಾಲಿನ ಪ್ರವೇಶಕ್ಕೆ ವೈದ್ಯಕೀಯ ಸೀಟುಗಳನ್ನು ಕಡಿತಗೊಳಿಸಿರುವುದಿಲ್ಲ.<br><br>ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಭಾರತೀಯ ವೈದ್ಯ ಪರಿಷತ್ತು (ಎಂಸಿಐ) ಈ ಕೆಳಕಂಡ ಕೊರತೆಗಳನ್ನು ಉಲ್ಲೇಖಿಸಿ 2018-19ನೇ ಸಾಲಿನ ಪ್ರವೇಶಕ್ಕೆ 150 ವೈದ್ಯಕೀಯ ಸೀಟುಗಳನ್ನು ಕಡಿತಗೊಳಿಸಿರುತ್ತಾರೆ.<br>1. Teaching Faculty Deficit<br>2. Resident doctors deficit<br>3. Non Availability of the E.T.O. sterilizer<br>4. CT Scan installed not function<br>5. Two mobile X-ray available & required-03 more<br>6. No lecture hall in teaching district hospital<br>7. Speech therapist post is vacant |
| ಆ) | ವೈದ್ಯಕೀಯ ಸೀಟುಗಳನ್ನು ಕಡಿತಗೊಳಿಸಿರುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? | ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಎಂಸಿಐ ಉಲ್ಲೇಖಿಸಿದ ಅಂಶ 1 ಮತ್ತು 2 ಕ್ಕೆ ಸಂಬಂಧಿಸಿದಂತೆ ಈಗಾಗಲೇ ಸಂಸ್ಥೆಯ ವಿವಿಧ ಬೋಧಕ ಹಾಗೂ ನಿವಾಸಿ ವೈದ್ಯರ ಹುದ್ದೆಗಳಿಗೆ ನೇಮಕಾತಿ ನಡೆದಿದ್ದು, ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಈಗಾಗಲೇ ಪ್ರಕಟಿಸಲಾಗಿರುತ್ತದೆ.<br>• ಎಂ.ಸಿ.ಐ. ಉಲ್ಲೇಖಿಸಿದ ಅಂಶ 3 & 4ಕ್ಕೆ ಸಂಬಂಧಿಸಿದಂತೆ, ಸಂಸ್ಥೆಯು ಈಗಾಗಲೇ E.T.O. sterilizer & CT Scan ಖರೀದಿಸಿ, ಅಳವಡಿಸಿದ್ದು, ಈ ಉಪಕರಣಗಳು ಕಾರ್ಯನಿರ್ವಹಿಸುತ್ತಿವೆ.<br>• Mobile X-ray ಉಪಕರಣಗಳ ಖರೀದಿ ಪ್ರಕ್ರಿಯೆ ಜಾರಿಯಲ್ಲಿದೆ.<br>• ಬೋಧಕ ಉಪನ್ಯಾಸಕ ಕೊಠಡಿಯ ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆಯಾಗಿದ್ದು, ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.<br>• Speech therapist ಹುದ್ದೆಯ ಭರ್ತಿಗಾಗಿ ಕ್ರಮವಹಿಸಲಾಗುತ್ತಿದೆ. ಈ ಎಲ್ಲಾ ವಿಷಯವನ್ನು ಈಗಾಗಲೇ ಎಂ.ಸಿ.ಐ. ರವರ ಗಮನಕ್ಕೆ ತರಲಾಗಿದೆ<br><br>ಮುಂದುವರೆದು, ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಎಂಸಿಐ 2018-19ನೇ ಸಾಲಿನ ಪ್ರವೇಶಕ್ಕೆ 150 ವೈದ್ಯಕೀಯ ಸೀಟುಗಳನ್ನು ಕಡಿತಗೊಳಿಸಿರುವ ಕ್ರಮವನ್ನು ಪ್ರಶ್ನಿಸಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಲಾಗಿದ್ದು, ಈ ಕುರಿತು ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿಯೂ ಅರ್ಜಿ ಸಲ್ಲಿಸಲಾಗುತ್ತಿದೆ. |

ಕಡತ ಸಂಖ್ಯೆ: ಆಕುಕ 298 ಎಂಪಿಎಸ್ 2018

(ಡಿ.ಕೆ. ಶಿವಕುಮಾರ್)
ಜಲಸಂಪನ್ಮೂಲ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು